# ಖ್ಯಾತ ಗ್ರೀಕ್ ಸಂಶೋಧಕ ಮತ್ತು ಸಂಗೀತಗಾರ ಕಾನ್ಸ್ಟಂಟಿನೋಸ್ ಕಲೈಟ್ಜಿಸ್ ಅವರೊಂದಿಗೆ ಪ್ರಧಾನ ಮಂತ್ರಿಯವರ ಭೇಟಿ

ಆಗಸ್ಟ್ 25, 2023

ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು 25 ಆಗಸ್ಟ್ 2023 ರಂದು ಅಥೆನ್ಸ್‌ನಲ್ಲಿ ಗ್ರೀಕ್ ಸಂಶೋಧಕ, ಸಂಗೀತಗಾರ ಮತ್ತು ಭಾರತದ ಸ್ನೇಹಿತ ಶ್ರೀ ಕಾನ್ಸ್ಟಂಟಿನೋಸ್ ಕಲೈಟ್ಜಿಸ್ ಅವರನ್ನು ಭೇಟಿಯಾದರು.

2. ಪ್ರಧಾನಮಂತ್ರಿಯವರು ಶ್ರೀ ಕಾನ್ಸ್ಟಂಟಿನೋಸ್ ಕಲೈಟ್ಜಿಸ್ ಅವರ ಭಾರತದ ಮೇಲಿನ ಪ್ರೀತಿ ಮತ್ತು ಭಾರತೀಯ ಸಂಗೀತ ಮತ್ತು ನೃತ್ಯದ ಬಗ್ಗೆ ಅವರ ಉತ್ಸಾಹವನ್ನು ಶ್ಲಾಘಿಸಿದರು. 27 ನವೆಂಬರ್ 2022 ರಂದು "ಮನ್ ಕಿ ಬಾತ್" ನ 95 ನೇ ಆವೃತ್ತಿಯಲ್ಲಿ ಪ್ರಧಾನಿ ಅವರ ಬಗ್ಗೆ ಪ್ರಸ್ತಾಪಿಸಿದ್ದರು.

3. ಅವರು ಗ್ರೀಸ್‌ನಲ್ಲಿ ಭಾರತೀಯ ಸಂಸ್ಕೃತಿಯನ್ನು ಮತ್ತಷ್ಟು ಜನಪ್ರಿಯಗೊಳಿಸುವ ಸಾಧ್ಯತೆಗಳನ್ನು ಚರ್ಚಿಸಿದರು.

**ಅಥೆನ್ಸ್**
**ಆಗಸ್ಟ್ 25, 2023**